ಪುಸ್ತಕ ಪರಿಚಯ

ಡಾ. ಬಿ.ಎಸ್.ಎನ್. ಪ್ರಸಾದರ

# ಭಾರತೀಯ ಧಾರ್ಮಿಕ ಸಾಹಿತ್ಯದ ವರ್ಗೀಕೃತ ನಿರೂಪಣೆ




*ಕೃತಿ*
**ಭಾರತೀಯ ಧಾರ್ಮಿಕ ಸಾಹಿತ್ಯದ ವರ್ಗೀಕೃತ ನಿರೂಪಣೆ**
*ಲೇಖಕರು*
**ಡಾ. ಬಿ.ಎಸ್.ಎನ್. ಪ್ರಸಾದ್**
**ಎಂ.ಎನ್. ಜಗದೀಶ್**
*ಪ್ರಕಾಶಕರು*
**ಭಾನು ಪ್ರಕಾಶನ, ಮೈಸೂರು**
*ಪ್ರತಿಗಳು ಸಿಗುವ ಸ್ಥಳ*
**ಭಾರತೀ ಪ್ರಕಾಶನ,**
**# 279, 13ನೇ ಮುಖ್ಯರಸ್ತೆ ,**
**3ನೇ ಅಡ್ಡರಸ್ತೆ , ಸರಸ್ವತಿಪುರಂ,**
**ಮೈಸೂರು-570 009**
ಫೋನ್: 0821-2543941
*ಪುಟಗಳು* : **214**
*ಬೆಲೆ* : **220/-**

**ಭಾ**ರತೀಯರಿಗೆ ಐತಿಹಾಸಿಕ ಪ್ರಜ್ಞೆ ಇಲ್ಲ, ಮಹಾನ್ ಗ್ರಂಥಗಳನ್ನು ರಚಿಸಿದವರು ತಮ್ಮ ಹೆಸರನ್ನಾಗಲಿ, ಕಾಲವನ್ನಾಗಲಿ ಹೇಳುವುದಿಲ್ಲ ಎಂಬ ಮಾತು ಇದೆ. ವಿಚಾರ ಮುಖ್ಯ, ಹೇಳಿದವನಾಗಲಿ ಅವನ ಕಾಲವಾಗಲಿ ಮುಖ್ಯವಲ್ಲ ಎನ್ನುವುದು ಭಾರತೀಯರ ಅನಿಸಿಕೆ. ಕವಿಗಳ ಕಾಲ ಕುರಿತ ಚರ್ಚೆಯು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮುಖ್ಯ ಭಾಗವೇ ಸರಿ. ಧಾರ್ಮಿಕ ಸಾಹಿತ್ಯ ಇಡೀ ದೇಶದ್ದಾಗಿರುವುದರಿಂದ ಅತಿ ವಿಶಾಲವಾಗಿದ್ದು, ವೇದ ಉಪನಿಷತ್ತುಗಳು, ಮತ ಪಂಥಗಳು, ವಿವಿಧ ಕ್ರಿಯಾವಿಧಿಗಳು, ಪುರಾಣಗಳು, ದರ್ಶನ ಶಾಸ್ತ್ರಗಳನ್ನು ಒಳಗೊಂಡಿದೆ. ಇವುಗಳಲ್ಲಿ ಏನಿದೆ ಎಂದು ಪರಿಚಯ ಮಾಡಿಕೊಳ್ಳುವ ಕುತೂಹಲ ಅನೇಕರಿಗೆ ಇರುತ್ತದೆ. ಇವರಿಗೆ ಆಯಾ ಮತಪಂಥಗಳ ಗುರುಗಳು ಮಾರ್ಗದರ್ಶನ ಮಾಡಬಹುದಾಗಿದ್ದರೂ, ಆ ಅಧ್ಯಯನ ಆಯಾ ಮತಪಂಥಗಳಿಗೆ ಮಾತ್ರ ಸೀಮಿತವಾದೀತು. ನಿಷ್ಪಕ್ಷಪಾತವೂ, ವಿಶಾಲವೂ ಆದ ಎಲ್ಲವನ್ನೂ, ಎಲ್ಲರನ್ನೂ ಒಳಗೊಳ್ಳುವ ಸಮನ್ವಯ ದೃಷ್ಟಿ ಸಾಧ್ಯವಾಗದು. ಈ ಕೊರತೆಯನ್ನು ಈಡೇರಿಸುವ ಸಣ್ಣ ಪ್ರಯತ್ನ ಡಾ. ಬಿ.ಎಸ್.ಎನ್. ಪ್ರಸಾದರಿಂದ ಆಗಿದೆ.

ಪಶ್ಚಿಮದಲ್ಲಿ ಇತಿಹಾಸದ ಸತ್ಯವನ್ನು ಕುರಿತ ಅನ್ವೇಷಣೆಗೆ ಮಹತ್ವ ಬರಲು ಗ್ರೀಕರು, ರೋಮನ್ನರು ಕಾರಣ ಎಂದು ಪ್ರೊ. ಎಸ್.ಎನ್.ಬಾಲಗಂಗಾಧರ ಅವರು ಹೇಳುತ್ತಾರೆ. ಜೀವನವು ಸತ್ಯವನ್ನಾಧರಿಸಿರಬೇಕು, ಸುಳ್ಳು ಹೇಳುವವರನ್ನು ಗಡೀಪಾರು ಮಾಡಬೇಕು ಎಂದು ಪ್ಲೇಟೋ ಹೇಳಿದನು. ಅವನನ್ನು ಅನುಸರಿಸಿ, ರೋಮನ್ನರೂ ಹಿಸ್ಟರಿ ಎಂಬುದು ಮಾತ್ರವೇ ಹಿಂದಿನ ಕಾಲವನ್ನು ಕುರಿತು ನಂಬಿಕೊಳ್ಳಬಹುದಾದದ್ದು ಎಂದು ಭಾವಿಸಿ, ತಮ್ಮ ಗತಕಾಲದ ಅಧಿಕೃತ ಹಿಸ್ಟರಿಗಳನ್ನು ಬರೆದರು. ಅವರ ಆಳ್ವಿಕೆಯಲ್ಲಿದ್ದ ಯಹೂದಿಗಳು, ಕ್ರೈಸ್ತರು ರೋಮನ್ನರ ದೇವತೆಗಳನ್ನು ಪೂಜಿಸಿದರೆ ತಮ್ಮ ದೇವರನ್ನು ವಿರೋಧಿಸಿದಂತಾಗಿ, ಪಾಪವಾಗುತ್ತದೆ – ಇದು ತಮ್ಮ ಧರ್ಮದ ಕಟ್ಟುಪಾಡು ಎಂದು ರೋಮನ್ನರ ಸಾಮಾಜಿಕ ಉತ್ಸವಗಳನ್ನು ಬಹಿಷ್ಕರಿಸಿದರು. ತಮಗೆ ಒಪ್ಪಿಗೆಯಾಗದಿದ್ದರೂ, ಪೂರ್ವಜರಿಂದ ಬಂದ ಇತರ ಸಂಪ್ರದಾಯಗಳನ್ನು ಗೌರವಿಸುವುದು ರೋಮನ್ನರ ಉದಾರತೆ. ಇದಕ್ಕಾಗಿ ಯಹೂದ್ಯರು ತಮ್ಮ ಹಳೆಯ ಒಡಂಬಡಿಕೆಯನ್ನು ತೋರಿಸಿದಾಗ, ಅವರನ್ನು ಸಹಿಸಿಕೊಳ್ಳಲಾಯಿತು. ಕ್ರೈಸ್ತರೂ ತಮ್ಮದು ರಿಲಿಜನ್ನು, ಹಿಂದಿನವರ ಅಂಧಾನುಕರಣೆಯಲ್ಲ, ಸತ್ಯಘಟನೆಗಳನ್ನು ಆಧರಿಸಿದ್ದು ಎಂದು ಸಾಬೀತು ಪಡಿಸಲು ಹೊಸ ಒಡಂಬಡಿಕೆಯನ್ನೂ, ತಮ್ಮ ಹಿಸ್ಟರಿಯನ್ನೂ ರಚಿಸಿದರು. ಮುಂದೆ ಪ್ರಾಟೆಸ್ಟಂಟರು ಹಿಸ್ಟರಿಯ ಸತ್ಯವನ್ನು ನೈಜ ಮಾನವ ವ್ಯಕ್ತಿ ಹಾಗೂ ಘಟನೆಗಳ ನೆಲೆಯಲ್ಲಿ ನಿಲ್ಲಿಸಿದರು. ಈ ಒತ್ತಡದಿಂದಲೇ ನಮ್ಮ ವಿದ್ವಾಂಸರೂ ರಾಮಾಯಣ ಮಹಾಭಾರತಗಳು ನಿಜವಾಗಿ ನಡೆದವು; ರಾಮ, ಕೃಷ್ಣರು ಐತಿಹಾಸಿಕ ವ್ಯಕ್ತಿಗಳು ಎಂದು ನಿರೂಪಿಸಲು ಪ್ರಯಾಸಪಡುತ್ತಿರುವುದು.

ಈ ಹಿನ್ನೆಲೆಯಲ್ಲಿ, ವಿದೇಶಕ್ಕೆ ಹೋದ ಭಾರತೀಯರಿಗೆ ತಮ್ಮ ಪ್ರಾಚೀನ ಧರ್ಮ, ತತ್ತ್ವಶಾಸ್ತ್ರಗಳನ್ನು ಅಲ್ಲಿನ ಸಾಮಾನ್ಯರ ಕುತೂಹಲ ತಣಿಸಲು ಸ್ಥೂಲವಾಗಿ ಪರಿಚಯಿಸುವ ಅಗತ್ಯ ಬೀಳುತ್ತದೆ. ಅಮೆರಿಕದಲ್ಲಿ ನೆಲೆಸಿದ್ದ ಪ್ರೊ. ಪ್ರಸಾದರ ಸ್ನೇಹಿತರೊಬ್ಬರು ಈ ಸಮಸ್ಯೆಯನ್ನು ವಿವರಿಸಿದಾಗ, ಅವರ ಒತ್ತಾಸೆಯ ಮೇರೆಗೆ ಈ ಪುಸ್ತಕವನ್ನು ರಚಿಸಲಾಗಿದೆ. ಧಾರ್ಮಿಕ ಗ್ರಂಥಗಳಲ್ಲಿ ಕಂಡುಬರುವಂತೆ ತತ್ತ್ವ ಪಕ್ಷಪಾತ, ತಮ್ಮ ಆಚಾರ್ಯರ ಸಿದ್ಧಾಂತವೇ ಸರಿ ಎನ್ನುವ, ಇತರರದನ್ನು ಖಂಡಿಸುವ ಪ್ರವೃತ್ತಿ ಇಲ್ಲಿ ಇಲ್ಲ. ವೇದಗಳಿಂದ ದರ್ಶನಗಳ

ವರೆಗೆ ಸಮಗ್ರ ವಿಷಯವನ್ನು ಸರಳಗೊಳಿಸಿ, ರೇಖಾನಕ್ಷೆಗಳನ್ನು ಬಳಸಿ ನೇರವಾಗಿ ನಿರೂಪಿಸುವುದು ಪ್ರೊ.ಪ್ರಸಾದರ ವಿಧಾನ. ಅವರು ಮೊದಲು ರೂಪಿಸಿಕೊಂಡದ್ದು ಪುಸ್ತಕದ ಮೊದಲ ಪುಟದಲ್ಲಿ ಕೊಟ್ಟಿರುವ **ಭಾರತೀಯ ಧಾರ್ಮಿಕ ಸಾಹಿತ್ಯದ ವರ್ಗೀಕರಣ** ಎಂಬ ರೇಖಾನಕ್ಷೆಯನ್ನು. ಇದನ್ನು ತಯಾರಿಸಿಕೊಳ್ಳಲು ಅವರಿಗೆ ಸುಮಾರು ಐದು ವರ್ಷ ಹಿಡಿಯಿತಂತೆ. ಅಧ್ಯಯನಕ್ಕೆ ತಮ್ಮದೇ ಆದ ಯೋಜನೆ ತಯಾರಿಸಿಕೊಂಡ ಮೇಲೆ, ವಿವಿಧ ಮೂಲಗಳಿಂದ ಪರಿಚಯಕ್ಕೆ ಬೇಕಾದ ಸಾಮಗ್ರಿಯನ್ನು ಸಂಗ್ರಹ ಮಾಡುವುದಕ್ಕೇ ಅನೇಕ ವರ್ಷಗಳಾದುವು. ಅದನ್ನು ಸರಳಗೊಳಿಸಿ, ಸುಲಭವಾಗಿ ಓದಿಕೊಳ್ಳುವಂತೆ ಈ ಗ್ರಂಥವನ್ನು ರಚಿಸಿದ್ದಾರೆ.

ಭಾರತೀಯ ಚಿಂತನೆಯನ್ನು ವೈದಿಕ, ಅವೈದಿಕ ಎಂದು ಎರಡು ಭಾಗ ಮಾಡಿಕೊಂಡಿದ್ದಾರೆ. ವೈದಿಕ ಸಾಹಿತ್ಯದಲ್ಲಿ ಶ್ರುತಿ ಸಾಹಿತ್ಯ, ಸ್ಮೃತಿ ಸಾಹಿತ್ಯ ಎಂಬ ಎರಡು ಕವಲುಗಳು. ಶ್ರುತಿ ಸಾಹಿತ್ಯವನ್ನು ಸಂಹಿತೆಗಳು, ಬ್ರಾಹ್ಮಣಗಳು, ಆರಣ್ಯಕಗಳು, ಉಪನಿಷತ್ತುಗಳ ಶೀರ್ಷಿಕೆಯಡಿ ಸಂಕ್ಷಿಪ್ತವಾಗಿ ಪರಿಚಯ ಮಾಡಿಕೊಡಲಾಗಿದೆ. ಸ್ಮೃತಿ ಸಾಹಿತ್ಯವನ್ನು ವೇದಾಂಗಗಳು, ಪುರಾಣ ಸಾಹಿತ್ಯ, ಷಡ್ದರ್ಶನಗಳು, ಪ್ರಸ್ಥಾನತ್ರಯ, ವೇದಾಂತ ದರ್ಶನಗಳು ಎಂದು ವರ್ಗೀಕರಿಸಿ, ಸ್ಥೂಲವಾಗಿ ಪರಿಚಯಿಸಲಾಗಿದೆ. ಇದೇ ನೂರು ಪುಟಗಳಷ್ಟು ವಿಸ್ತಾರವಾಗಿದ್ದು, ಪುಸ್ತಕದ ಮುಖ್ಯ ಭಾಗವಾಗಿದೆ. ಧಾರ್ಮಿಕ ಚಿಂತನೆಯ ಇನ್ನೊಂದು ಕವಲಾದ ಅವೈದಿಕವನ್ನು ಆಸ್ತಿಕ ಆಗಮ ಸಾಹಿತ್ಯ, ಅವೈದಿಕ ನಾಸ್ತಿಕ ದರ್ಶನಗಳು ಎಂದು ವಿಂಗಡಿಸಿ, ಪರಿಚಯಿಸಲಾಗಿದೆ. ಈಗ ಕಾಣುತ್ತಿರುವ ದೇವಸ್ಥಾನ ಕೇಂದ್ರಿತ, ಬಾಹ್ಯ ಆಚರಣೆ ಪ್ರಧಾನವಾದ ಹಿಂದೂಧರ್ಮದ ಕ್ರಿಯಾವಿಧಿಗಳಿಗೆ ಶೈವ, ವೈಷ್ಣವ ಹಾಗೂ ಶಾಕ್ತ ಆಗಮಗಳು ಆಧಾರ. ವೈದಿಕರನ್ನು ಎದುರಿಸಿ ನಿಂತ ಬೌದ್ಧ, ಜೈನ ಮತ್ತು ಚಾರ್ವಾಕರ ಚಿಂತನೆ ಅವರ ತ್ರಿಪಿಟಿಕ ಜಾತಕ ಕಥೆಗಳಲ್ಲಿ, ಜೈನಾಗಮ ಜೈನ ಪುರಾಣಗಳಲ್ಲಿ ಹಾಗೂ ಲೋಕಾಯತ ಸಿದ್ಧಾಂತದಲ್ಲಿ ನಿರೂಪಿತವಾಗಿದೆ. ವೇದ ಪ್ರಮಾಣವನ್ನು ಅಂಗೀಕರಿಸಿದವು ಆಸ್ತಿಕ ಹಾಗೂ ನಿರಾಕರಿಸಿದುವು ನಾಸ್ತಿಕ; ಇವುಗಳಲ್ಲಿಯೂ ಆತ್ಮತತ್ತ್ವವನ್ನು ಜೈನರು ಅಂಗೀಕರಿಸುತ್ತಾರೆ, ಬೌದ್ಧರು ನಿರಾಕರಿಸುತ್ತಾರೆ. ಚಾರ್ವಾಕರು ದೇಹಾತ್ಮವಾದಿಗಳು.

ಪ್ರೊ. ಪ್ರಸಾದರ ಶೈಲಿಯ ಮುಖ್ಯ ಗುಣ ಸ್ಪಷ್ಟತೆ ಹಾಗೂ ಸಂಕ್ಷಿಪ್ತತೆ. ಒಂದು ಉದಾಹರಣೆ: ''ಒಮ್ಮೊಮ್ಮೆ ವೇದಾಂತಿಗಳು ಆಗಮಗಳನ್ನು ವೇದಬಾಹ್ಯವೆಂದು ದೂರುವುದೂ ಆಗಮಿಕರು ವೇದವನ್ನು ಮೋಕ್ಷೋಪಯೋಗಿ ಅಲ್ಲದ ಯಜ್ಞವಾದವೆಂದು ತಿರಸ್ಕರಿಸುವುದೂ ಕಾಣಬರುವುದುಂಟು. ಮೋಕ್ಷಸಾಧನೆ ಹಾಗೂ ಸಾಕ್ಷಾತ್ಕಾರಕ್ಕಾಗಿ ಹೊರಟ ಆಗಮಗಳು ಕೆಲವೊಮ್ಮೆ ಹತ್ತಿರದ ದಾರಿಗಳೆಂದು ಉಗ್ರ ಹಾಗೂ ಆಕ್ಷೇಪಾರ್ಹ ಆಚಾರಗಳಿಗೂ ಅವಕಾಶವಿತ್ತಿರುವುದನ್ನು ನೋಡುತ್ತೇವೆ. ಕೆಲವೊಂದು ಶೈವ ಹಾಗೂ ಶಾಕ್ತಮತಗಳಲ್ಲಿ (ಕಾಪಾಲಿಕ, ಕೌಲ, ಅಘೋರಿ, ಇತ್ಯಾದಿ) ಮಾಂಸ, ಮದ್ಯ, ಮತ್ಸ್ಯ, ಮುದ್ರಾ, ಮೈಥುನ ಮುಂತಾದ ವಾಮಾಚಾರಗಳೂ, ನರಬಲಿಯೇ ಮುಂತಾದ ಕ್ರೂರ ಹಿಂಸಾಚಾರಗಳ ಆಚರಣೆಗಳಿಂದಾಗಿ ಇವು ಸಾಮಾಜಿಕ ಬಹಿಷ್ಕಾರಕ್ಕೂ ಗುರಿಯಾದವು.

''ಆಗಮಗಳೆಲ್ಲ ಸಾಮಾನ್ಯವಾಗಿ ನಾಲ್ಕು ಪಾದಗಳಲ್ಲಿ ವಿಭಕ್ತವಾಗಿರುತ್ತವೆ:

೧. ವಿದ್ಯಾ ಅಥವಾ ಜ್ಞಾನಪಾದ. ೨. ಯೋಗಪಾದ. ೩. ಕ್ರಿಯಾಪಾದ. ೪. ಚರ್ಯಾಪಾದ.

''ಕ್ರಿಯಾ ಮತ್ತು ಚರ್ಯಾಪಾದಗಳೇ ಗಾತ್ರದಲ್ಲಿ ವಿಸ್ತೃತವಾಗಿದ್ದು, ದೇವಾಲಯಗಳ ನಿರ್ಮಾಣವಿಧಿ, ಪೂಜಾಕ್ರಮಗಳು, ಮೂರ್ತಿ ಪ್ರತಿಷ್ಠಾವಿಧಾನಗಳು, ಧಾರ್ಮಿಕ ಸಂಪ್ರದಾಯಗಳು ಇವುಗಳ ವಿವರಣೆಗೆ ಮೀಸಲಾಗಿವೆ. ಜ್ಞಾನ ಹಾಗೂ ಯೋಗ ಪಾದಗಳಲ್ಲಿ ತಾತ್ತ್ವಿಕ ವಿವೇಚನೆ, ಸೃಷ್ಟಿಪ್ರಕ್ರಿಯೆ, ಮೋಕ್ಷಸಾಧನೆಗಳ ನಿರ್ದೇಶನಗಳೂ ಬರುತ್ತವೆ.''

ಪುಸ್ತಕದ ಬೆಲೆ, ಮುದ್ರಣ, ಕಾಗದ ಎಲ್ಲವೂ ಸಮರ್ಪಕವಾಗಿದೆ. ರೇಖಾನಕ್ಷೆಗಳನ್ನು ಮುದ್ರಿಸುವ ಸಲುವಾಗಿಯೆ ಪುಸ್ತಕವನ್ನು ಥೀಸಿಸ್‌ಗಳಂತೆ ದೊಡ್ಡ ಆಕಾರದಲ್ಲಿ ತರಲಾಗಿದೆ. ಹೆಚ್ಚು ಜನರಿಗೆ ತಲುಪುವಂತೆ ಇಂಗ್ಲಿಷ್ ಹಾಗೂ ಹಿಂದಿಯಲ್ಲಿ ಈ ಪುಸ್ತಕವನ್ನು ಪ್ರಕಟಿಸುವ ಯೋಜನೆಯೂ ಇದೆ. ಭೌತಶಾಸ್ತ್ರದ ಪ್ರಾಧ್ಯಾಪಕ ಹಾಗೂ ವಿಜ್ಞಾನಿಯೊಬ್ಬರು ಆಧುನಿಕ ಮನಸ್ಸಿಗೆ ಹಿಡಿಸುವಂತೆ ಮಾಡಿದ ಈ ವರ್ಗೀಕೃತ ನಿರೂಪಣೆ ಸ್ತುತ್ಯರ್ಹ ಪ್ರಯತ್ನ.

***– ಡಾ. ಹೆಚ್. ಪಾಂಡುರಂಗ ವಿಠಲ***

## ತಿದ್ದುಪಡಿ

ಕಳೆದ ನವೆಂಬರ್ 2016ರ ಸಂಚಿಕೆಯ ಪುಸ್ತಕ ಪರಿಚಯ ವಿಭಾಗದಲ್ಲಿ ಸಿ.ಎಸ್.ಮಂಗಳಮ್ಮ ಅವರ **'ಮಹಾಭಾರತ ಕಥಾಸಂಗ್ರಹ'** ಕೃತಿಯ ಬೆಲೆ ರೂ.130 ಎಂದು ತಪ್ಪಾಗಿ ಪ್ರಕಟವಾಗಿತ್ತು. ಅದು **ರೂ.330.00** ಎಂದಾಗಬೇಕು. ಈ ತಿದ್ದುಪಡಿಗಾಗಿ ವಿಷಾದಿಸುತ್ತೇವೆ. *–ಸಂ*

**ಭೇತವ್ಯಂ ನ ತಥಾ ಶತ್ರೋರ್ನಾಗ್ನೇರ್ನಾಹೇರ್ನ ಚಾಶನೇಃ ।**
**ಇಂದ್ರಿಯೇಭ್ಯೋ ಯಥಾ ಸ್ವೇಭ್ಯಸ್ತೈರಜಸ್ರಂ ಹಿ ಹನ್ಯತೇ ॥**

ಶತ್ರುವಿಗಾಗಲಿ, ಬೆಂಕಿಗಾಗಲಿ, ಸರ್ಪಕ್ಕಾಗಲಿ, ಸಿಡಿಲಿಗಾಗಲಿ ಅಷ್ಟು ಹೆದರಬೇಕಾಗಿಲ್ಲ. ತನ್ನ ಇಂದ್ರಿಯಗಳಿಗೆ ಹೆಚ್ಚು ಹೆದರಬೇಕಾಗಿದೆ. ಏಕೆಂದರೆ, ಅವು ಸದಾ ಇವನನ್ನು ಪೀಡಿಸುತ್ತಲೇ ಇರುತ್ತವೆ.

*– ಸೌಂದರನಂದ, 13.31*